‘ಹಡೆದವ್ವನಿದ್ದರೂ ನೀನೇ ಬೇಕೆಂಬ ಹಟಮಾರಿತನ ಈ ಪೋರನಿಗೆ. ಸಮ್ಮೂ, ಈ ದಿನ ಸುದಿನ ನನ್ನ ಪಾಲಿಗೆ’ ಎಂದೆನ್ನುತ್ತಾ ಅನಿಕೇತ್ ಬೋರಲ್ಲಿ ಗಂಗಾಮಾತೆ ದರ್ಶನವಾದ ಬಗ್ಗೆ ತಿಳಿಸಲು ಮುಂದಾದ.

‘ನೀನು ಹೇಳಬೇಕೆನ್ನುವ ಸುದ್ದಿ ಗೊತ್ತಿದೆ ಬಿಡೋ. ಖುಷಿ ಸಮಾಚಾರ ನನ್ನ ಕಿವಿ ತಲುಪಿ ತುಂಬಾ ಹೊತ್ತಾಗಿದೆ. ಭೂಪ, ಈಗ ಮನಸ್ಸು ಮಾಡಿದ್ದಾನೆ...?’ ಹುಸಿ ಮುನಿಸಿತ್ತು ಅವಳ ದನಿಯಲ್ಲಿ.

‘ಹೌದೇ...? ಸಾರಿ ಕಣೇ ಕೆಲಸದ ಒತ್ತಡದಲ್ಲಿ ತಕ್ಷಣ ತಿಳಿಸಲಾಗಲಿಲ್ಲ. ನಿನಗ್ಹೇಗೆ ಗೊತ್ತಾಯಿತು...?’

‘ಯಾಕೆ ನನ್ನವರೆನ್ನುವವರು ಅಲ್ಲಿ ಯಾರೂ ಇಲ್ಲವೇ? ನಿನ್ನವ್ವ ನನ್ನವ್ವನೂ ಹೌದು. ಅವರೇ ವಿಷಯ ತಿಳಿಸುತ್ತಾ ನೀನು ತುಂಬಾ ಖುಷಿಯಲ್ಲಿರುವುದನ್ನೂ ಹೇಳಿದರು.’

‘ಹೌದೇ?’ ಖುಷಿಯ ಪರಾಕಾಷ್ಠೆಯಲ್ಲಿದ್ದ ಅನಿಕೇತ್ ಉದ್ಗರಿಸಿದ್ದ. ಸಮೃದ್ಧಿಯೂ ಖುಷಿ ಅನುಭವಿಸಿದಳು.

‘ಜೊತೆಯಲ್ಲಿದ್ದಿದ್ದರೆ ಪೋರನ ಬೆನ್ನು ಚಪ್ಪರಿಸಿ, ಹಾರೈಸಿ ಚೆಲ್ಲಾಟವಾಡುತ್ತಿದ್ದೆ’ ಎಂದೂ ಉಲಿದಳು.

ತುಸು ಹೊತ್ತು ಇಬ್ಬರೂ ಖುಷಿ ಖುಷಿಯಿಂದ ಏನೇನೋ ಮಾತಾಡಿದರು. ದಣಿದ ದೇಹಕ್ಕೆ ವಿಶ್ರಾಂತಿಯ ಅಗತ್ಯವಿದೆ ಎಂಬುದಕ್ಕೆ ಇಂಬು ಕೊಡುವಂತೆ ಅನಿಕೇತ್ ಮೇಲಿಂದ ಮೇಲೆ ಆಕಳಿಸತೊಡಗಿದಾಗ ಸಮೃದ್ಧಿ ಮಾತಿನಲ್ಲೇ ಮುದ್ದು ಮಾಡಿ ಶುಭರಾತ್ರಿ ಹೇಳಿದ್ದಳು.

ಅನಿಕೇತ್ ಉತ್ಸಾಹದ ಚಿಲುಮೆಯಂತಾಗಿದ್ದ. ಕೆಲಸಗಳ ಭರಾಟೆಯಲ್ಲಿ ಆರು ತಿಂಗಳುಗಳು ಸರಿದಿದ್ದೇ ಗೊತ್ತಾಗಲಿಲ್ಲ. ಎರಡು ವಾರಗಳಿಂದ ಬೆಂಗಳೂರಿಗೆ ಹೋಗಲು ಆಗಿರಲಿಲ್ಲ. ಮನದನ್ನೆ ಸಮೃದ್ಧಿಯ ಸಾಂಗತ್ಯಕ್ಕೆ ಮನಸ್ಸು ಹಂಬಲಿಸುತ್ತಿತ್ತು. ಈ ವಾರ ತಪ್ಪದೇ ಹೋಗಬೇಕೆಂದುಕೊಂಡು ನಿರ್ಧರಿಸಿದ. ಆ ವಾರ ವೀಕೆಂಡ್ ರಜೆಗಳ ಜೊತೆಗೆ ಶುಕ್ರವಾರ ಮತ್ತು ಸೋಮವಾರದ ಸರಕಾರಿ ರಜೆಗಳೂ ಸೇರಿಕೊಂಡು ನಾಲ್ಕು ದಿನ ರಜೆಗಳ ಸಾಲೇ ಇತ್ತು. ಮಾಮೂಲಿನಂತೆ ಶುಕ್ರವಾರ ಸಂಜೆ ಬೆಂಗಳೂರಿಗೆ ಪ್ರಯಾಣ ಬೆಳೆಸಬೇಕೆಂದುಕೊಂಡ. ಅಂದು ಗುರುವಾರ. ಮಧ್ಯಾಹ್ನವೇ ಸಮೃದ್ಧಿಯಿಂದ ಫೋನ್ ಕಾಲ್. ಅವಳು ಮಾತಿಗೆ ಶುರುವಿಕ್ಕಿಕೊಳ್ಳುವುದಕ್ಕೆ ಮುಂಚೇನೇ ತಾನು ಬರುವುದರ ಬಗ್ಗೆ ತಿಳಿಸಿದ ಅನಿಕೇತ್.

‘ಓಹೋ, ಈ ಒಂಟಿ ಜೀವಿಯ ನೆನಪು ಈಗ ಬಂತೇನು ಸಾಹೇಬರಿಗೆ...?’ ಹುಸಿ ಮುನಿಸು ಸಮೃದ್ಧಿಯ ಮಾತಲ್ಲಿ.

‘ನೀನೇಕೆ ಒಂಟಿ ಜೀವಿ? ನಾನಿಲ್ಲವೇ ನಿಂಜೊತೆಗೆ...?’

‘ಹೌದೌದು, ನಾನೀಗ ಒಂಟಿಯಲ್ಲ’ ಒಗಟಾಗಿ ಮಾತಾಡಿದಳು ಸಮೃದ್ಧಿ.

‘ಮತ್ತೇಕೆ ಈ ಕುಟುಕು...?’

‘ಸುಮ್ಮನೇ. ಇರಲಿ, ಇಂದು ನೀನು ಬರುವುದು ಬೇಡ. ನಾನೇ ಬರುವೆ’

‘ಹೌದಾ...?’

‘ಹೆಚ್ಚಿನ ಮಾತುಗಳು ಸಮಕ್ಷಮದಲ್ಲಿ. ಓಕೇನಾ...?’

‘ಓಕೆ ಪುಟ್ಟಾ’

ಮರುದಿನ ಬೆಳಿಗ್ಗೆ ಆರಕ್ಕೇ ಸಮೃದ್ಧಿ ಅನಿಕೇತನ ಜೊತೆಗಿದ್ದಳು. ಸಮೃದ್ಧಿ ತುಂಬಾ ಉಲ್ಲಸಿತಳಾಗಿದ್ದುದು ಅನಿಕೇತನ ಮನದರಿವಿಗೆ ಬರದಿರಲಿಲ್ಲ. ಬಸ್‌ನಿಲ್ದಾಣದಿಂದ ಮನೆ ತಲುಪುತ್ತಲೇ ಮಾಮೂಲಿನಂತೆ ಸಮೃದ್ಧಿ ಮೊದಲು ಅತ್ತೆ, ಮಾವನ ಕಾಲಿಗೆ ನಮಸ್ಕರಿಸಿ ನಂತರ ಅತ್ತೆಯ ಕೊರಳಿಗೆ ಜೋತುಬಿದ್ದು ಆಕೆಯ ಕಿವಿಯಲ್ಲಿ ಕಿಸಿಕಿಸಿ ಪಿಸಪಿಸ ಅಂತ ಮಾತಾಡಿದಳು. ಅಕ್ಕಮಹಾದೇವಿ ಪ್ರಸನ್ನವದನೆಯಾದರೂ ಏನೆಂದು ಬಾಯಿ ಬಿಡಲಿಲ್ಲ. ಸಮೃದ್ಧಿ ತನ್ನ ಬ್ಯಾಗ್ ಎತ್ತಿಕೊಂಡು ಅನಿಕೇತನೊಂದಿಗೆ ಕೋಣೆಯತ್ತ ಹೆಜ್ಜೆ ಹಾಕಿ ಅವನೆದೆಯೊಳಗೆ ಸೇರಿಕೊಂಡಳು.

‘ಅಮ್ಮಾ, ಅವರಲ್ಲಿ ಹೊಸ ಕಳೆಯೊಂದರ ಸೆಳೆಕಿದೆ...?’

‘ಹೌದೇ...? ಹಾಗೆನ್ನಿಸುತ್ತಿದೆಯೇ?’

‘ನನ್ನ ಕಣ್ಣ ಕನ್ನಡಿಯಲ್ಲಿ ಮುಖ ನೋಡಿಕೊಂಡು ಕನ್‌ಫರ್ಮ್ ಮಾಡಿಕೊಳ್ಳಬಹುದು’

‘ಬೇಡ ಬೇಡ, ಅದೇನೂ ಬೇಡ. ಅನಿ, ನಾನೂ ನಿಂಜೊತೆಗೆ ಇಲ್ಲೇ ಇದ್ದು ಬಿಡಬೇಕೆಂದಿದ್ದೇನೆ...’ ಮೆಲ್ಲಗೆ ಪಿಸುಗುಟ್ಟಿದಳು.

‘ಮತ್ತೆ ಬೆಂಗಳೂರು ಕೆಲಸ...?’



‘ಕೆಲಸ ಯಾರಿಗೆ ಬೇಕಿದೆ? ನಂಗೂ ಸಾಕಾಗಿ ಹೋಗಿದೆ’ ನವಿರಾಗಿ ಅನಿಕೇತನ ಎದೆಗೆ ಗುದ್ದುತ್ತಾ ಉಲಿದಳು ಸಮೃದ್ಧಿ.

‘ಹೌದೇ? ತುಂಬಾ ಖುಷಿಯ ವಿಚಾರ. ಆಕಾಶಕ್ಕಿಂತಲೂ ವಿಶಾಲವಾದ, ಅದಕ್ಕಿಂತಲೂ ಎತ್ತರವಾದ ಖುಷ್ ಖಬರಿ ಇದು’

‘ಹೌದೇ...? ಹಾಗಾದರೆ ಅದಕ್ಕಿಂತಲೂ ಹೆಚ್ಚಿನ ಖುಷ್ ಖಬರಿಯೊಂದನ್ನೂ ಕೊಡುವೆ. ಅನೂ, ನಾನೀಗ ಒಂಟಿಯಲ್ಲವೆಂದು ನಿನ್ನೆ ಫೋನಲ್ಲಿ ಹೇಳಿದೆನಲ್ಲವೇ...?’

‘ಹೌದು, ಈಗೇನೀಗ?’

‘ಅನೂ... ನಮ್ಮಿಬ್ಬರ ಪ್ರೇಮದ ಕುಡಿ ನನ್ನೊಡಲಲ್ಲಿ ರೂಪುಗೊಂಡಿದೆ. ನನಗೀಗ ಎರಡು ತಿಂಗಳು’

‘ಹೌದೇ...? ಅಮ್ಮನ ಕಿವಿಯಲ್ಲಿ ಪಿಸುಗುಟ್ಟಿದ್ದು ಇದೇನಾ...?’ ಎಂದೆನ್ನುತ್ತಾ ಅನಿಕೇತ್ ಸಮೃದ್ಧಿಯ ಮೊಗವನ್ನು ಬೊಗಸೆಯಲ್ಲಿ ಬಂಧಿಸಿ ಲೊಚಲೊಚನೇ ಮುದ್ದಿಟ್ಟ ಅವಳ ರಂಗೇರಿದ ಕದಪು, ಬಿರಿದ ತುಟಿಗಳಿಗೆ.

ಅದಾಗಿ ಮೂರು ತಿಂಗಳ ನಂತರ ಸಮೃದ್ಧಿ ತನ್ನ ಸಾಮಾನುಗಳೊಂದಿಗೆ ಹಳ್ಳಿ ಮನೆ ಸೇರಿಕೊಂಡಿದ್ದಳು.

ಹತ್ತು ವರ್ಷಗಳ ತರುವಾಯ

ಅನಿಕೇತ್‌ನ ಕಾಯಕದ ಕೀಲಿಮಣೆ ಕಂಪ್ಯೂಟರ್‌ನಿಂದ ಕೃಷಿಗೆ ವರ್ಗವಾಗಿತ್ತು. ಮದುವಣಗಿತ್ತಿಯಂತೆ ಸಿಂಗಾರಗೊಂಡಿದ್ದ ಇಪ್ಪತ್ತೂ ಎಕರೆ ಜಮೀನನ್ನು ನೀರಾವರಿಗೆ ಒಳಪಡಿಸಿದ್ದ. ಐದು ಎಕರೆಯಲ್ಲಿ ಪೇರಲ ಮತ್ತು ಮಾವು, ಇನ್ನೈದು ಎಕರೆ ಜಮೀನಿನಲ್ಲಿ ಜಂಬು ನೇರಳೆ, ಮತ್ತೈದು ಎಕರೆ ಜಮೀನಿನಲ್ಲಿ ದಾಳಿಂಬೆ ಸಮೃದ್ಧಿ ಫಲ ನೀಡತೊಡಗಿದ್ದವು. ಉಳಿದ ಐದು ಎಕರೆಯಲ್ಲಿ ತರಕಾರಿ, ತೆಂಗು, ಲಿಂಬು ನಳನಳಿಸುತ್ತಿದ್ದವು. ಎಲ್ಲವೂ ಸಿಹಿ, ಮಧುರ ಹಣ್ಣಿನ ತಳಿಗಳೇ, ಸಾವಯವ ಬೆಳೆಗಳೇ. ಇದಲ್ಲದೇ ಸಾವಿರಾರು ತೇಗ, ಶ್ರೀಗಂಧ, ಹೆಬ್ಬೇವು ಮತ್ತು ಸಿಲ್ವರ್ ಓಕ್ ಗಿಡಗಳು ಮೈದುಂಬಿಕೊಂಡು ನಿಂತಿದ್ದವು. ಮುಂದಿನ ಹತ್ತು ವರ್ಷಗಳಲ್ಲಿ ಅವು ಬಹುದೊಡ್ಡ ಆದಾಯವನ್ನು ತರುವಂಥವು. ಮಳೆ ನೀರಿನ ಕೊಯ್ಲಿಗಾಗಿ ಆರು ಕೃಷಿ ಹೊಂಡಗಳು, ನಾಲ್ಕು ಚೆಕ್ ಡ್ಯಾಮ್‌ಗಳು, ಹಲವಾರು ಕಾಂಪೋಸ್ಟ್ ಗುಂಡಿಗಳು ಇನ್ನೇನೋ ಇದ್ದು ರೈತ ಬಾಂಧವರನ್ನು ಇಡೀ ವರ್ಷ ಆಕರ್ಷಿಸುತ್ತಿದ್ದವು. ಕೃಷಿ ಇಲಾಖೆ, ವಿಶ್ವವಿದ್ಯಾಲಯದವರು ಅನಿಕೇತನ ಜಮೀನಿನಲ್ಲಿ ವರ್ಷಕ್ಕೆ ಎರಡು ಮೂರಾದರೂ ಕ್ಷೇತ್ರೋತ್ಸವಗಳನ್ನು ಆಚರಿಸುತ್ತಿದ್ದರು. ಹಿಂಡು ಹಿಂಡು ರೈತರನ್ನು ಕರೆದುಕೊಂಡು ಬಂದು ಕೃಷಿಯ ಮಾಹಿತಿ ನೀಡುತ್ತಿದ್ದರು.

ಎರಡು ಮುದ್ದಾದ ಮಕ್ಕಳು ಅನಿಕೇತ್, ಸಮೃದ್ಧಿ ದಂಪತಿಗಳ ಮಡಿಲು ತುಂಬಿದ್ದವು. ಮಗ ಸಂಭವ್ ನಾಲ್ಕನೇ ತರಗತಿಯಲ್ಲಿ ಓದುತ್ತಿದ್ದರೆ ಮಗಳು ವಚನಾ ಎರಡನೇ ತರಗತಿಯಲ್ಲಿ ಅಭ್ಯಸಿಸುತ್ತಿದ್ದಳು. ಅನಿಕೇತನ ತಂದೆತಾಯಿ ಮೊಮ್ಮಕ್ಕಳ ಲಾಲನೆ ಪಾಲನೆಯಲ್ಲಿ ಸಂತೃಪ್ತರಾಗಿದ್ದರು. ಸಮೃದ್ಧಿ ಮತ್ತು ಅನಿಕೇತರ ದಾಂಪತ್ಯ ಸುತ್ತಮುತ್ತಲಿನ ಊರಿನವರಿಗೆ ಮಾದರಿಯಾಗಿತ್ತು. ಸಮೃದ್ಧಿ ಬೆಂಗಳೂರಿಗಿಂತಲೂ ಹಳ್ಳಿಯಲ್ಲಿ ತುಂಬಾ ಖುಷಿ ಖುಷಿಯಿಂದ ಇದ್ದಾಳೆ. ಬೇಸಾಯದಲ್ಲಿನ ಆದಾಯದಿಂದ ತುಂಬು ಸಂತೃಪ್ತ ಜೀವನ ಸಾಗಿತ್ತು. ಸತತ ಪ್ರಯತ್ನ, ಪರಿಶ್ರಮ, ಶ್ರದ್ಧೆಗಳಿಂದ ಅನಿಕೇತ್, ಸಮೃದ್ಧಿ ‘ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆ ಮೇಲು’ ಎಂಬುದನ್ನು ಸಾಬೀತು ಮಾಡಿದ್ದರು. ■